ಮಾಡತಕ್ಕಂಥ ಅನೇಕ ಸಂಗತಿಗಳಿವೆ. ಆದ್ದರಿಂದ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಇನ್ನು ಹಾಸ್ಟೆಲ್ ಬಗ್ಗೆ ಈಗಾಗಲೇ ಉಲ್ಲೇಖ ಮಾಡಿದ್ದೇನೆ. ತಾವು ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ. 23 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಕೊರಗ ಗರ್ಲ್ಸ್ ಹಾಸ್ಟೆಲ್ ಕಟ್ಟಡವನ್ನು ಕಟ್ಟಲಾಗಿದೆ. ಈ ಹಾಸ್ಟೆಲ್ ಕಟ್ಟಡದ ಕಾಮಗಾರಿ ಸರಿ ಇಲ್ಲದೇ ಇರುವುದರಿಂದ ಇದನ್ನು ಕೆಡವುವುದಕ್ಕೆ ಆದೇಶ ಮಾಡಲಾಗಿದೆ. ಈ ಕಟ್ಟಡವು ವಾಸ ಮಾಡುವುದಕ್ಕೆ ಅಯೋಗ್ಯವಾಗಿದೆ ಎಂದು ತಿಳಿಸಲಾಗಿದೆ. ಆದ್ದರಿಂದ ಇನ್ನು ಮುಂದಾದರೂ ಈ ರೀತಿಯ ಕಳಪೆ ಕಾಮಗಾರಿಗಳು ಆಗದೇ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ ಕಳಪೆ ಕಾಮಗಾರಿಗಳನ್ನು ಮಾಡಿರತಕ್ಕಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೀರಾ? ಹಾಗೆಯೇ ಮತ್ತೆ ತಕ್ಷಣ ಹಾಸ್ಟಲ್ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಅಜಲ ಪದ್ಧತಿ ನಿಷೇದದ ಬಗ್ಗೆ ಒಂದು ಶಾಸನವನ್ನು ತರಲಾಗುತ್ತಿದೆ. ಇವತ್ತು ಇದು ಪ್ರಿಂಟ್ ಆಗಿದ್ದರೆ ನಾಳೆ ದಿವಸವೇ ನಾನು ಈ ಸದನದಲ್ಲಿ ಮಂಡಿಸುತ್ತೇನೆ. ಮಾನ್ಯ ಸದಸ್ಯರು ಹಾಸ್ಟಲ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ, ಆದರೂ ಕೂಡ ಈ ಹಾಸ್ಟಲ್ ಕಟ್ಟಡವನ್ನು ನಾನು ನೋಡಿರುವುದರಿಂದ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಬಯಸುತ್ತೇನೆ. ಹಿಂದೆ ನಗರ ಸಭೆಯವನು ಆ ಕಟ್ಟಡವನ್ನು ಕಟ್ಟಿದ್ದರು. ನಾನು ಹೋಗಿ ಈ ಕಟ್ಟಡವನ್ನು ಪರಿಶೀಲನೆ ಮಾಡಿದಾಗ ತಾಂತ್ರಿಕ ದೋಷ ಕಂಡುಬಂದಿದ್ದರಿಂದ ಇದನ್ನು ಕೆಡವಿ ಹಾಕಿ ಹೊಸದಾಗಿ ಕಟ್ಟಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರಲ್ಲಿ ಈಗ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ನಿವೇಶನವನ್ನು ನಮ್ಮ ಇಲಾಖೆಗೆ ಕೊಟ್ಟರೆ ತತ್‌ಕ್ಷಣ ನಿಮಗೆ ಕಟ್ಟಡ ಕಟ್ಟಿಸಿಕೊಡತಕ್ಕಂಥ ಕೆಲಸ ಮಾಡಿಸಿ ಕೊಡುತ್ತೇನೆ. ಆದ್ದರಿಂದ ನಗರ ಸಭೆಯ ವ್ಯಾಪ್ತಿಯಲ್ಲಿರತಕ್ಕಂಥ ಈ ನಿವೇಶನವನ್ನು ನನ್ನ ಇಲಾಖೆಗೆ ಹಸ್ತಾಂತರ ಮಾಡಿದರೆ ಇದೇ ಜಾಗದಲ್ಲಿ ಮತ್ತೆ ಒಂದು ಉತ್ತಮವಾದಂಥ ಕಟ್ಟಡವನ್ನು ಕಟ್ಟಿಸಿಕೊಡುತ್ತೇನೆ.

ರಾಜ್ಯದಲ್ಲಿ ಕೊಳವೆ ಬಾವಿಗಳ ನೀರಿನ ಮಟ್ಟ

322(3090)

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕೆಲವು ಭಾಗಗಳಲ್ಲಿ ಸಾರ್ವಜನಿಕ ಕೊಳವೆ ಬಾವಿಗಳ ನೀರಿನ ಮಟ್ಟ ಆಳಕ್ಕೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಸಾರ್ವಜನಿಕ ಬೋರ್‌ವೆಲ್‌ಗಳ ಬಳಿ ಖಾಸಗಿಯವರು ಬೋರ್‌ವೆಲ್‌ಗಳನ್ನು ಕೊರೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಕಡಿಮೆಯಾಗಲು ಕಾರಣವಾಗುವುದಿಲ್ಲವೆ?

ಈ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಾಜ್ಯದಾದ್ಯಂತ ನೀರಾವರಿಗಾಗಿ ಭಾರಿ: ಕೊಳವೆ ಬಾವಿಗಳಿಂದ ಅಂತರ್ಜಲವನ್ನು ಯಥೇಚ್ಛವಾಗಿ ಬಳಕೆ ಮಾಡುತ್ತಿರುವುದರಿಂದ ಹಾಗೂ ಜಲಮಟ್ಟವು ಆಳಕ್ಕೆ ಹೋಗುತ್ತಿರುವುದರಿಂದ, ಇಲಾಖೆಯು ಅಧ್ಯಯನಕ್ಕಾಗಿ 1572 ಕೊಳವೆ ಬಾವಿ: ತೋಡು ಬಾವಿಗಳನ್ನು ನಿಗದಿ ಮಾಡಿ ಪ್ರತಿ ತಿಂಗಳು ಮಾಪನ ಮಾಡುತ್ತಿರುವುದರಿಂದ, ಜಲಮಟ್ಟವು 6.50 ಮೀ.ನಿಂದ 16.50 ಮೀಟರ್‌ವರೆಗೆ ಇಳಿಕೆಯಾಗಿರುವುದಾಗಿ ಅಧ್ಯಯನದಿಂದ ತಿಳಿದು ಬಂದಿದೆ. ಈಗಾಗಲೇ 'ಬೂದು' ಮತ್ತು 'ಕಪ್ಪು' ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ, ಪ್ರಾಯೋಗಿಕವಾಗಿ ಅಂತರ್ಜಲ ಕೃತಕ ಮರುಪೂರೈಕೆಯ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಹಮ್ಮಿಕೊಂಡಿದೆ.

ಇ) ಹೌದು.

ಹೌದು.

ಈ) ನಬಾರ್ಡ್ ಸಂಸ್ಥೆಯವರ ವರ್ಗೀಕರಣ ಆದೇಶ ದಿನಾಂಕ: 12-02-1996ರ ಪ್ರಕಾರ 'ಕಪ್ಪು' ಪ್ರದೇಶಗಳಲ್ಲಿ ಹೊಸದಾಗಿ ನೀರಾವರಿ ಕೊಳವೆ ಬಾವಿ: ತೋಡುಬಾವಿಗಳನ್ನು ನಿರ್ಮಾಣ ಮಾಡಲು ಅವಕಾಶವಿರುವುದಿಲ್ಲ ಹಾಗೂ ಪಂಪು ಸೆಟ್‌ಗಳಿಗೆ ಎಲೆಕ್ಟ್ರಿಕಲ್ ಕನೆಕ್ಷನ್ ಕೊಡಲು ಆಸ್ಪದ ಇರುವುದಿಲ್ಲ. (ವಿವರ: ಅನುಬಂಧ-'ಅ' ರಲ್ಲಿ ನೀಡಲಾಗಿದೆ.)

ಸರ್ಕಾರದ ಆದೇಶ ದಿನಾಂಕ: 04-10-1996ರ ಪ್ರಕಾರ ಎರಡು ಸಫಲ

ಕೊಳವೆ ಬಾವಿಗಳ ಮಧ್ಯೆ ಕನಿಷ್ಟ ಅಂತರ 250 ಮೀಟರ್ ಇರಬೇಕು ಮತ್ತು ಎರಡು ಸಫಲ ತೋಡುಬಾವಿಗಳ ಮಧ್ಯೆ ಕನಿಷ್ಟ ಅಂತರ 182 ಮೀಟರ್‌ಗಳು ಇರಬೇಕು. (ವಿವರ: ಅನುಬಂಧ-'ಬ'ದಲ್ಲಿ ನೀಡಲಾಗಿದೆ)

ಜೊತೆಗೆ, ಈ ರೀತಿ ಗೊತ್ತುಗುರಿ ಇಲ್ಲದೆ ಅಂತರ್ಜಲದ ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಶಾಸನ ಒಂದನ್ನು ತರಲು ಉದ್ದೇಶಿಸಿದ್ದು, ಅದು ಈಗ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಅನುಬಂಧ - ಅ

NATIONAL BANK FOR AGRICULTURE AND RURAL DEVELOPMENT

Jeevan Prakash Annexe
113/1, J.C.Road
Post Box No.29
Bangalore-560002.

Telephone: 2225241-44
Telegram: AGREFINANS
Telex : 0045-8318 ARDC IN
Fax : 2222148

NB.BL.APR/2455/C2(B)/95-96

12 Feb 1996

The Director
Mines and Geology
S.P.Complex
Lalbaugh Road
Subbaiah Circle
Bangalore- 560027

Dear Sir

Ground water Assessment - Cateoorination of Blocks

We forward herewith a list of Dark and Grey talukas in the state of Karnataka based on the ground water assessment carried out by the Department of Mines and Geology and duly examined by our Head office. You are advised to programme Minor Irrigation investments during 96-97 keeping in view the reassessed "Dark" and "Grey" blocks listed in the annexure. While there should not be any fresh Minor Irrigation programme in "Dark" blocks, there may be limited programme in "Grey" blocks after getting the approval of NABARD.

Yours Faithfully,

(B.Nagarajan)
Deputy General Manager

STATE - KARNATAKA

LIST OF DARK AND GREY TALUKAS Revised list

(As per the Groundwater Assessment carried out by the Department of Mines and Geology)

(Position as on Dec.1994)

Sr. No.	District	Name and Category of Taluka	
		Dark	Grey
1.	2.	3.	4.
1.	Bangalore	1. Anekal	1. Doddaballapur
		2. Bangalore North	2. Ramnagar
		3. Bangalore South	
		4. Chennapattana	
		5. Devanahalli	
		6. Hoskote	
2.	Belgaum	1. Chikkodi	1. Athani
		2. Hukkeri	2. Bailhongal
3.	Bellary	NIL	1. H.B.Hally
4.	Bidar	NIL	1. Bidar
5.	Bijapur	1. Indi	1. Bagewadi
			2. Bijapur
6.	Chitradurga	NIL	1. Challakere

		2. Chitradurga
7. D.Kannada	1. Bantwal	1. Belthangadi
	2. Sulya	
8. Hassan	1. Channarayapatna	1. Arsikere
9. Kolar	1. Chickaballapur	1. Chintamani
	2. Kolar	2. Gowribidanur
	3. Malur	3. Mulbagal
		4. Sidlaghatta
		5. Srinivasapur
10. Mysore	1. Kollegal	1. Chamarajanagar
11. Raichur	NIL	1. Kustagi
12. Tumkur	1. Gubbi	1. Koratagere
	2. Madhugiri	2. Kunigal
	3. Tiptur	3. Sira
	4. Tumkur	
	5. Turuvekere	
TOTAL	21	22

ABSTRACT

Sr. No.	Year of Assessment	No.of Districts	Total No.of Talukas	Categorisation of Taluka			Remarks
				Dark	Grey	White	
1.	2.	3.	4.	5.	6.	7.	8.
1.	Janaury 1987	19	175	6	10	159	
2.	September 1995	19	175	9	9	157	
3.	December 1994	19	175	21	22	132	
Percentage as of December 1994				12	12.5	75.5	

ಅನುಬಂಧ - ಬ

PROCEEDINGS OF THE GOVERNMENT OF KARNATAKA

Sub: Internal spacing between Groundwater extraction structures - reg.

READ: 1. GWS/STA/IFI/86-87/12820-862,dated 18.12.1986
2. GWS/STA/IFI/86-87/3772, dated 5.1.1987
3. DMU/GWS/DDH/Spacing/92-93, dated 8.12.1992.

PREAMBLE:

In the Circulars issued by the Department of Mines & Geology cited above, internal spacing between two Groundwater extraction structures (borewells, dug-cum-borewells and dug wells) in the command and non-command areas has been stipulated. No guidelines were issued for the distance between a drinking water source and irrigation wells. This has resulted in over exploitation of groundwater resources in certain areas and declining of groundwater levels leading to failure of dug wells and shallow borewells used as sources of drinking water. This has caused hardship to the people in rural areas depending upon such sources for their drinking water and it has become necessary to drill additional borewells for drinking water supply to such rural areas leading to considerable additional expenditure on the part of Government and local authorities. It has further resulted in wasteful expenditure to the farmers due to the failure of irrigation wells.

Therefore, there is a need to discourage digging and drilling of wells in close proximity of one another and to prescribe internal spacing between two Groundwater

extraction structures to protect the drinking water sources and irrigation wells. Under these circumstances, the following:

GOVERNMENT ORDER NO.CI 255 MGS 96,
BANGALORE DATED: 4.10.96

Government are pleased to direct that the Department of Mines and Geology, Karnataka Electricity Board, Financial Institutions and all Government Agencies concerned with Groundwater exploitation, feasibility certification and financing etc., shall observe and implement the following restrictions and shall not provide any assistance or service to any person/organisation in contravention of the following restrictions:

1. The minimum inter-well spacing (successful wells) between two borewells, a borewell and a dug-cum-borewell, berween two dug-cum-borewells, berween a dug-cum-borewell and a dug well shall be 250 Mts.

2. The minimum inter-well spacing between two successful dug wells shall be 182 Mts.

3. The minimum inter-well spacing between two successful dug wells in the perennial command areas shall be 130 Mts.

4. The inter-well spacing between a drinking water source (borewell, dug well, dug-cum-borewell etc.,) and a borewell, a dug-cum-borewell and a dug well used for any other purpose shall be 250 Mts.

5. No existing groundwater extraction structure (borewell, dug well, dug-cum-borewell etc.,) which is within a distance of 250 Mts., from the drinking

water source shall be redeveloped by means of deepening, drilling additional borewells in the open well and further re-drilling of the existing borewell to a greater depth.

6. The above minimum internal spacing berween two ground-water extraction structures shall not be applicable to borewells, dug-cum-borewells or open wells sunk or being used for the purpose of public drinking water supply by the Government Agencies such as Public Health Engineering Department, Karnataka Urban Water Supply and Drainage Board, Bangalore Water Supply and Sewerage Board, Zilla Panchayats, Municipalities and other local authorities.

BY ORDER AND IN THE NAME OF THE GOVERNOR OF KARNATAKA,

Sd/-

(ATUL KUMAR TIWARI)
Deputy Secretary to Government,
Commerce and Industries Department.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನೆನ್ನೆದಿವಸ ದೀರ್ಘವಾಗಿ ಈ ಸದನದಲ್ಲಿ ಚರ್ಚೆಯಾಗಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿನ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ತಯಾರಿಲ್ಲ. ಹಿರಿಯ ಮತ್ತು ಅನುಭವಿ ಮಂತ್ರಿಗಳಾಗಿರುವಂಥ ಶ್ರೀಮಾನ್ ಘೋರ್ಪಡೆಯವರು ಸವಿಸ್ತಾರವಾಗಿ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರದ ಪ್ರತಿ ಜೊತೆ ನಬಾರ್ಡ್‌ಗೆ 1994ರಲ್ಲಿ ಕಳುಹಿಸಿರತಕ್ಕಂಥ ಪತ್ರ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಕಳುಹಿಸಿರತಕ್ಕಂಥ ಸುತ್ತೋಲೆಯನ್ನು ಉತ್ತರದ ಜೊತೆಗೆ ಲಗತ್ತಿಸಿದ್ದಾರೆ. ಇದರಿಂದ ಶಾಸಕರಿಗೆ ಮತ್ತು ಪ್ರಶ್ನೆ ಕೇಳತಕ್ಕಂಥ ಸದಸ್ಯರಿಗೂ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಇದೇ ರೀತಿ ಎಲ್ಲದಕ್ಕೂ ಉತ್ತರಗಳು ಬರಬೇಕೆಂದು ನಮ್ಮ ನಿರೀಕ್ಷೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಈಗ ನಮ್ಮ ಮುಂದೆ ಇರತಕ್ಕಂಥ ವಿಷಯ ಏನೆಂದರೆ, ಇದೇ ಸದನದಲ್ಲಿ ಆ್ಯಕ್ಟ್ ಪಾಸ್ ಮಾಡಿ ಕೇಂದ್ರದ ಒಪ್ಪಿಗೆಗೆ ಕಳುಹಿಸಿದ್ದೇವೆ. ಇದರಲ್ಲಿ ಕೆಲವು ಕ್ಲಾರಿಫಿಕೇಶನ್‌ಗೋಸ್ಕರ ಮಾಡಿಫೈ ಮಾಡಬೇಕೆನ್ನುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ಈ ವಿಷಯ ನನಗೆ ಗೊತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ತಿಳಿಸಬೇಕು. ಈ ವರ್ಷದಲ್ಲಿ ಏಪ್ರಿಲ್ ಈಗಾಗಲೇ ಮುಗಿಯುತ್ತಿದ್ದು, 2000ನೇ ಡಿಸೆಂಬರ್ ಒಳಗೆ ಇದನ್ನು ಕಾರ್ಯಾಚರಣೆ ಮಾಡುವುದಕ್ಕೆ ಸಾಧ್ಯವಿದೆಯೇ? ಏಕೆಂದರೆ ಇದು ತುಂಬಾ ಅವಶ್ಯಕವಾಗಿ ಆಗಲೇಬೇಕಾಗಿದೆ. ಆದ್ದರಿಂದ ಇದು ಸಾಧ್ಯ ಆಗುತ್ತದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಆರ್. ಡಿ.ಪಿ.ಆರ್. ಇಲಾಖೆಯಿಂದ ಕೆಲವು ಪ್ರಪೋಸಲ್‌ಗಳನ್ನು ತೆಗೆದುಕೊಂಡು ಮತ್ತು ಇದರ ಜೊತೆಗೆ ಜನರಲ್ ಆಗಿ ಯಾವ ತರಹ ಮಾಡಬಹುದೆಂದು ನಮ್ಮ ಕೆಲವು ಸಲಹೆಗಳನ್ನು ಕೂಡ ಸೇರಿಸಿ ಕಾನೂನು ಇಲಾಖೆಗೆ ಕಳುಹಿಸಿಕೊಡಲಾಗಿದೆ. ಇದು ಪರಿಶೀಲನೆ ಆದ ಕೂಡಲೇ ಬಹುಶಃ ಈ ತಿಂಗಳಲ್ಲಿ ಅಂತಿಮ ನಿರ್ಣಯವನ್ನು ಪ್ರಕಟಿಸಲಾಗುವುದು.

10-40 ಪಿ.ಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಇದಕ್ಕೆ ರಾಷ್ಟ್ರಾಧ್ಯಕ್ಷರ ಅನುಮತಿಗೋಸ್ಕರ ಕೇಂದ್ರ ಸರ್ಕಾರಕ್ಕೆ ಹೋಗಿದೆ. ತಾವು ಇದನ್ನು ತಕ್ಷಣ ಕಳುಹಿಸಿ ಈ ವರ್ಷದಲ್ಲಿ ಜಾರಿಗೊಳಿಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ? ನನಗೆ ಸ್ಪೆಸಿಫಿಕ್ ಉತ್ತರ ಬೇಕು. ತಾವು ಈ ವರ್ಷ ಅಥವಾ 6 ತಿಂಗಳಲ್ಲಿ ಮಾಡುತ್ತೇವೆಂದರೆ ನನಗೆ ಸ್ಯಾಟಿಸ್‌ಫ್ಯಾಕ್ಷನ್ ಆಗುತ್ತದೆ.

ಶ್ರೀ ವಿ.ಮುನಿಯಪ್ಪ: ಈ ವರ್ಷ ಮಾಡುತ್ತೇವೆ.